ಹುಳಿಯಾಳದಲ್ಲಿ ಕೆರೆ ಬದಿಯಲ್ಲಿ ಮನೆಗಳನ್ನು ಕಟ್ಟಿಕೊಂಡವರಿಗೆ ಹಕ್ಕುಪತ್ರ ವಿತರಣೆ

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಹುಳಿಯಾಳ ಎಂಬ ಊರು ಬರುತ್ತದೆ. ಹುಳಿಯಾಳ ನಗರಪ್ರದೇಶದಲ್ಲಿ ಇರತಕ್ಕಂತಹ ಬಸ್ ಸ್ಟಾಂಡ್ ಹತ್ತಿರ ಒಂದು ಕೆರೆ ಇದೆ. ಇದು ಸುಮಾರು 141 ಹೆಕ್ಟೆರ್ ಅಚ್ಚು-ಕಟ್ಟು ಹೊಂದಿರತಕ್ಕ ಕೆರೆಯಾಗಿದೆ. ಸುಮಾರು ನೂರಾರು ವರ್ಷಗಳಿಂದ ಈ ಕೆರೆಗೆ ನೀರು ಬಂದಿಲ್ಲ. ಆ ಅಚ್ಚು-ಕಟ್ಟಿನಲ್ಲಿ ಎಲ್ಲಾ ಊರು ಆಗಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ನನ್ನ ಅಭಿಪ್ರಾಯ ಏನು ಎಂದರೆ, ಈ ಕೆರೆಯನ್ನು ಕೆರೆಗಳ ಪಟ್ಟಿಯಲ್ಲಿ ಸೇರಿಸದೆ, ಈ ಕೆರೆಯ ಬದಿಯಲ್ಲಿ ಇರುವ ಒಣ ಕಾಲುವೆಯಲ್ಲಿ ಬಹಳ ವರ್ಷಗಳಿಂದ ನೂರಾರು ಕುಟುಂಬಗಳು ಮನೆಗಳನ್ನು ಕಟ್ಟಿಕೊಂಡು ಎಲ್ಲಾ ರೀತಿಯ ನಾಗರೀಕತೆಯ ಸೌಲಭ್ಯಗಳನ್ನು ಅನುಭವಿಸುತ್ತಿರುವ ಸಂದರ್ಭದಲ್ಲಿ ಅವರಿಗೆ ಯಾವುದೇ ರೀತಿಯ ಹಕ್ಕುಪತ್ರವನ್ನು ಕೊಡಲು ಆಗಲಿಲ್ಲ. ಆದ್ದರಿಂದ ಈ ಹಕ್ಕುಪತ್ರವನ್ನು ಕೊಡುವ ಸಲುವಾಗಿ ಆ ಕೆರೆಯ ಬದಿಯಲ್ಲಿ ಬರತಕ್ಕಂತಹ ಪ್ರದೇಶವನ್ನು ಗ್ರಾಮಪಂಚಾಯಿತಿಗೆ ವಹಿಸಿಕೊಡುವ ಪ್ರಸ್ತಾವವನ್ನು ಹತ್ತಾರು ವರ್ಷಗಳಿಂದ ಸರ್ಕಾರದ ಹತ್ತಿರ ಪೆಂಡಿಂಗ್‌ನಲ್ಲಿ ಇದೆ ಇದರ ಸಲುವಾಗಿ ನಾನು ಮಾನ್ಯ ಸಣ್ಣ ನೀರಾವರಿ ಮಂತ್ರಿಗಳನ್ನು ಕೇಳುತ್ತೇನೆ, ಹತ್ತಾರು ವರ್ಷಗಳಿಂದ ಇರತಕ್ಕಂತಹ ಈ ಸಮಸ್ಯೆಗೆ ಒಂದು ಅಂತಿಮ ನಿರ್ಣಯವನ್ನು ಕ್ಯಾಬಿನೆಟ್ ಮಟ್ಟದಲ್ಲಿ ತೆಗೆದುಕೊಳ್ಳಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಉತ್ತರವನ್ನು ಯಾರು ಕೊಡುತ್ತಾರೆ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಯಾರು ಬೇಕಾದರೂ ಹೇಳಬಹುದು ಎಂದು ತೀರ್ಮಾನವಾಗಿದೆ, 20 ಜನ ಮಂತ್ರಿಗಳ ಪರವಾಗಿ ನಾಣಯ್ಯನವರು ಹೇಳುತ್ತಾರೆ. ಮಾನ್ಯ ಪ್ರಕಾಶ್‌ರವರೇ, ಐದು ಜನ ಮಂತ್ರಿಗಳ ಪರವಾಗಿ ನೀವು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾಹಿತಿಯನ್ನು ತರಿಸಿಕೊಂಡು ಹೇಳುತ್ತೇನೆ.

ರೈತರಿಗೆ ತೊಂದರೆ ಕೊಡುತ್ತಿರುವ ಅರಣ್ಯ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ

ಶ್ರೀ ಎಸ್. ಎಂ. ನಾಗರಾಜ್ (ತರೀಕೆರೆ) : ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಮಳಿನಿ ಬೆಳ್ಳೆನಳ್ಳಿ ಎಂಬ ಗ್ರಾಮ ಇದೆ. ಈ ಗ್ರಾಮದಲ್ಲಿ ಹೆಚ್ಚಿನ ಭಾಗದಲ್ಲಿ ಹರಿಜನ-ಗಿರಿಜನರು ಮತ್ತು ಹಿಂದುಳಿದ ವರ್ಗದವರೇ ಜಾಸ್ತಿ ಇದ್ದಾರೆ. ಇವರು 1963ರಿಂದ ಈ ಗ್ರಾಮದ ಸರ್ವೆ ನಂ 4 ರಲ್ಲಿ ಇವರು ಸರ್ಕಾರದಿಂದ ಸಾಗುವಳಿ ಚೀಟಿಯನ್ನು ಪಡೆದುಕೊಂಡು ಸಾಗುವಳಿ ಮಾಡತಕ್ಕಂತಹ ಜಮೀನಿನಲ್ಲಿ ಸುಮಾರು 57 ಜನಕ್ಕೆ 1963ರಿಂದ 73ರ ವರೆಗೆ ಮಂಜೂರು ಆಗಿರತಕ್ಕ ಆ ಜಾಗದಲ್ಲಿ ವಿನಾ ಕಾರಣ ಭದ್ರಾವತಿ ಪೇಪರ್ ಮಿಲ್‌ನವರು ಮತ್ತು ಅರಣ್ಯ ಇಲಾಖೆಯವರು ಬಂದು ಒತ್ತುವರಿ ಮಾಡಿಕೊಂಡು ಜನರಿಗೆ ಹಿಂಸೆ ಕೊಡುವುದು, ಅವರನ್ನು ಹೊಡೆಯುವುದು ಮತ್ತು ಅವರ ಮೇಲೆ ವಿನಾ ಕಾರಣ ಕೇಸ್ ದಾಖಲು ಮಾಡತಕ್ಕಂತಹ ಒಂದು ಪದ್ಧತಿಯು 1988ರಿಂದ ನಡೆದುಕೊಂಡು